ನಮಗೆ ತೃಪ್ತಿಯುಂಟು, ಸಮಾಧಾನವುಂಟು' ಎಂದು ಒಂದು ತೆರನಾದ ನಿರಾಳ ಭಾವವೊಂದನ್ನು ಹೊರಹಾಕಿದರು. ನಾನು ಸೀತಣ್ಣನನ್ನು ದಿಟ್ಟಿಸಿದೆ. ಅವರ ಮನಸ್ಸಿನಲ್ಲಿ ಮಂದಹಾಸವೊಂದು ಮಿನುಗುತ್ತಿತ್ತು.

ಅಷ್ಟರಲ್ಲಿ ಕುಮಾರ್ ಫೋನ್ ಶಬ್ದ. 'ಯಾ ಮ್ಯಾಡಮ್, ಹೌದಾ, ಬರ್ತಾ ಇದೀವಿ. ಫ್ರೆಂಡ್ಸ್ ಲಂಚ್ ಈಸ್ ರೆಡಿ, ಬರಲಿಕ್ಕೆ ಆರ್ಡರ್ ಆಗಿದೆ.' ನಾವು ಹೋಗಿ ಕೈ–ಕಾಲು–ಮೋರೆ ತೊಳೆದುಕೊಂಡು ಹಾಲ್‌ನಲ್ಲಿ ವಿರಾಜಮಾನರಾದೆವು. ಗೋಡೆಯ ಮೇಲೆ ಪಿಕಾಸೊ, ಶೆಮಿಲ್ಲೋ, ರವಿವರ್ಮ ಅವರ ಅತ್ಯಾಕರ್ಷಕ ಚಿತ್ರಗಳು ನೋಡುಗರ ಕಣ್ಮನವನ್ನು ಸೆಳೆಯುತ್ತಿದ್ದವು. ಹಾಲ್‌ನಲ್ಲಿ ಕೋಳಿಮೊಟ್ಟೆಯಾಕಾರದ ಜಗಮಗಿಸುವ ಗ್ಲಾಸಿನ ಟೀಪಾಯ್, ಬೀಟೆಮರದ ಚಿತ್ತಾಕರ್ಷಕ ಕೆತ್ತನೆಯ ಸೋಫಾ ಮೆತ್ತನೆಯ ಹಾಸನ್ನು ಹೊದ್ದು ಮಲಗಿತ್ತು. ಜೊತೆಗೆ ಕುಶನ್‌ಯುಕ್ತ ನಾಲ್ಕು ಹೊಳೆಯುವ ಬೆತ್ತದ ಕುರ್ಚಿಗಳು. ವಿಶಾಲವಾದ ಕಿಟಕಿಗಳಿಗೆ ಮೆರಗು ನೀಡುವ ತೆಳ್ಳಗಿನ ನೀಲಿ ಪರದೆಗಳು. ಎಲ್ಲೆಲ್ಲೂ ಶುಚಿ, ಶುಭ್ರತೆ. ಸದಭಿರುಚಿಯ ಸುಂದರ ವಾತಾವರಣ. ಕರೆ ಬಂದಾಗ ನಾವು ಡೈನಿಂಗ್ ಹಾಲ್ ಪ್ರವೇಶಿಸಿದೆವು. 'ಸಾರ್, ಡು ಯು ಲೈಕ್ ಟು ಹ್ಯಾವ್ ಡ್ರಿಂಕ್ಸ್?' ಮನೆಯೊಡತಿಯ ಪ್ರೀತಿಯ ಉಪಚಾರ. 'ನೋ, ಪ್ಲೀಸ್' ಎಂದೆ. 'ನಿಮ್ಮ ಮಿಸೆಸ್ಸಿಗೆ ಹೇಳೂದಿಲ್ಲ ಮಾರಾಯ್ರೆ' ಅಂತ ಕುಮಾರ್ ಹೇಳಿದಾಗ ಎಲ್ಲರೂ ಗೊಳ್ಳನೇ ನಕ್ಕರು. ಕುಮಾರ್ ಖೀರು ಬಾಯಲ್ಲಿಡುತ್ತ ಹೇಳಿದರು– 'ನೋಡಿ ಸಾರ್, ನೀವಿಬ್ರೂ ವೆಜ್ ಆ್ಯಂಡ್ ನಾನ್‌ವೆಜ್, ಡ್ರಿಂಕ್ಸ್ ಅಫ್‌ಕೋರ್ಸ್! ನಮಗೆ ಯಾವುದರ ಬಗ್ಗೆಯೂ ಉದಾಸೀನ ಅನ್ನುವದು ಇಲ್ಲವೇ ಇಲ್ಲ' ಸೀತಣ್ಣನಿಗೆ ನಗು ತಡೆಯಲಾಗಲಿಲ್ಲ. ವೆಜಿಟೆಬಲ್ ಬಿರಿಯಾನಿ, ಜಾಮೂನು, ಮೊಸರುವಡೆ, ಖೀರು, ಹಪ್ಪಳ–ಸಂಡಿಗೆ, ಅನ್ನ ಸಾರು ರುಚಿಕಟ್ಟಾದ ಅಡುಗೆ. 'ಅನ್ನದಾತಾ ಸುಖೀಭವ' ಸೀತಣ್ಣ ಅತಿಥೇಯರನ್ನು ಮನಃಪೂರ್ವಕವಾಗಿ ಹರಸಿದರು.

★★★

ನಮ್ಮ ಕಾರು ಬೆಂಗಳೂರು ಕಡೆ ನಿಧಾನವಾಗಿ ಚಲಿಸುತ್ತಿತ್ತು. ಸೀತಣ್ಣ ಏನನ್ನೋ ಗಹನವಾಗಿ ಯೋಚಿಸುತ್ತಿದ್ದಾರೆಂದು ಅಂದುಕೊಂಡೆ. 'ಮೂರ್ತಿ, ನನಗೊಂದು ಸಂದೇಹ' ಅವರು ಮೆಲ್ಲಗೆ ಮಾತಿಗಾರಂಭಿಸಿದರು. 'ಹೇಳಿ' ಅಂದೆ. 'ಕುಟುಂಬ, ಸಂಸಾರ ಅನ್ನುವುದು ಮನುಷ್ಯನಿಗೆ ಅನಿವಾರ್ಯವೇ? ಮತ್ತೆ ಪರಿಪೂರ್ಣ ಸಂಸಾರ ಅನ್ನುವುದಕ್ಕೆ ಏನಾದ್ರೂ ಮಾನದಂಡ ಅಂತ ಉಂಟಾ?' ನನಗೆ ತಕ್ಷಣ ಉತ್ತರಿಸಲಾಗಲಿಲ್ಲ. 'ಕುಮಾರ್ ಅವರನ್ನು ನೋಡಿ. ಅವರದ್ದು ವಿವಾಹ, ಮಕ್ಕಳು ಹೊರತಾದ ಸಮೃದ್ಧಿಯ, ನೆಮ್ಮದಿಯ ಬದುಕು ಅಂತ ಅನ್ನಿಸೋದಿಲ್ವಾ?' 'ಇರಬಹುದೇನೋ' ನಾನು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಉತ್ತರಿಸಿದೆ. ಅವರು ಮುಂದುವರಿದರು, 'ನೋಡಿ, ಸಾಂಗತ್ಯ ಪ್ರತಿ ಜೀವಿಗೂ ಅಗತ್ಯ. ನಿಜ. ಆದರೆ ಮನುಷ್ಯ ತನ್ನ ಸಾಂಗತ್ಯದ ವ್ಯಾಖ್ಯಾನವನ್ನು ಅದ್ಯಾವುದೋ ಗಳಿಗೆಯಲ್ಲಿ ಕುಟುಂಬದ ಜೊತೆಗೆ ಗಂಟು ಹಾಕಿಕೊಂಡ ಅನ್ನಿಸ್ತದೆ, ಮಾರಾಯ್ರೆ. ಆದ್ರೆ ನಮ್ಮ ಬದುಕು ಬರೆದಿಟ್ಟ ಚಿತ್ರಕಥೆ ಅಲ್ಲವಲ್ಲ. ಪ್ರತಿಯೊಬ್ಬನ ಆಸಕ್ತಿ, ಆಲೋಚನೆ ಹಾಗೂ ಆಯ್ಕೆ ಸಂಪೂರ್ಣ ಭಿನ್ನ ಮತ್ತು ವಿನೂತನ, ಒಪ್ತೀರಾ?' ನಾನು 'ಹೂಂ' ಅಂದೆ. 'ಸರಿಯಾಗಿ ಯೋಚನೆ ಮಾಡಿ ಹೌದು ಅಂತ ಹೇಳಿ, ಮಾರ್ರೆ' ಅಂತ ನಕ್ಕಂತೆ ಮಾಡಿದರು. ಆದರೆ ನಗಲಿಲ್ಲ. ಅವರ ಮಾತು ಮುಂದುವರಿಯಿತು. 'ಕುಟುಂಬದಲ್ಲಿ ಒಬ್ಬ ಲೋಕರೂಢಿಯಂತೆ ಸಂಸಾರಿಯಾದರೆ ಇನ್ನೊಬ್ಬ ಹಿಮಾಲಯದತ್ತ ಮುಖ ಮಾಡಿ ನಡೆದಾಗ ಬದುಕಿನ ನಿಗೂಢತೆಯ ಅರಿವಾಗ್ತದೆ. ಅಂದ್ರೆ ಸಂಸಾರ, ಕುಟುಂಬ